ಸಂಬಂಧಪಟ್ಟವರಾದರೆ ಒಂದು ಕಾನೂನು ಸಾಮಾನ್ಯ ಜನಕ್ಕಾದರೆ ಮತ್ತೊಂದು ಕಾನೂನು, ಇದರ ಪ್ರತಿಫಲವನ್ನು ಮುಂದೆ ಇವರೂ ಕೂಡ ಉಣ್ಣುತ್ತಾರೆ ಅಂತ ಎಚ್ಚರಿಕೆ ಹೇಳಿ ಸರ್ಕಾರದ ಈ ನೀತಿಯನ್ನು ಪ್ರತಿಭಟಿಸಿ ಹೊರಗಡೆ ಹೋಗುತ್ತಿದ್ದೇವೆ.

(ಶ್ರೀ ಸಿ. ಬೈರೇಗೌಡರು ಸಭಾತ್ಯಾಗ ಮಾಡಿದರು)

ಶ್ರೀ ವೈ.ಕೆ. ರಾಮಯ್ಯ : ಮಾನ್ಯ ಅಧ್ಯಕ್ಷರೇ, ಈಗಿನ ಪರಿಸ್ಥಿತಿಯಲ್ಲಿ ಆಡಳಿತ ಪಕ್ಷದಿಂದ ಬಹುಶಃ ಇದಕ್ಕಿಂತ ಹೆಚ್ಚಿನದೇನನ್ನೂ ನಾನು ನಿರೀಕ್ಷೆ ಮಾಡಲಾರೆ. ಒಂದು ಬೆಟ್ಟ ಅಗೆದು ಇಲಿ ಹಿಡಿದಂತಾಗಿದೆ. ಇಷ್ಟೆಲ್ಲಾ ಬೆಟ್ಟ ಅಗೆದರೂ ಏನೂ ಪ್ರಯೋಜನವಾಗಲಿಲ್ಲ. ಬೈರೇಗೌಡರು ಈಗಾಗಲೇ ಹೇಳಿದಂತೆ ಬಹುಶಃ ಇದು ಒಳ್ಳೆಯದಲ್ಲ. ನಾನು ಆಗಲೇ ಹೇಳಿದ್ದೇನೆ. ಇಲ್ಲಿ ರಮೇಶ್ ಅವರು ಇದ್ದಾರೆ, ಮಂಜುನಾಥರವರು ಇದ್ದಾರೆ ಅಥವಾ ಪೀಠದಲ್ಲಿರುವ ಅಧ್ಯಕ್ಷರಿದ್ದಾರೆ, ಅದು ಅಷ್ಟು ಮುಖ್ಯವಲ್ಲ. ನಾನು ಆಗಲೇ ಹೇಳಿದೆ; ನಾನು ಅವರನ್ನು ಕುಣಿಗಲ್ ಚುನಾವಣೆಯಲ್ಲಿ ನೋಡಲಿಲ್ಲ. ಒಂದು ದಿವಸ ಯಾವುದೋ ಒಂದು ದೇವಸ್ಥಾನದ ಹತ್ತಿರ ನೋಡಿದ್ದೇನೆ ಅಷ್ಟೆ ಪ್ರಶ್ನೆ ಅದಲ್ಲ. ಈ ಸರ್ಕಾರದ ಬಗ್ಗೆ ಜನರಲ್ಲಿ ನಂಬಿಕೆ ಬರಬೇಕಾದರೆ, ಕಾನೂನಿನ ಬಗ್ಗೆ ವಿಶ್ವಾಸ ಹುಟ್ಟಬೇಕಾದರೆ, ನೀವು ಈ ಕೆಲಸ ಮಾಡಬೇಕಾದ್ದು ನಿಮ್ಮ ಅದ್ಯ ಕರ್ತವ್ಯ ಇತ್ತು. ಆ ಕರ್ತವ್ಯವನ್ನು ಪರಿಪಾಲನೆ ಮಾಡುವುದಕ್ಕೆ ನೀವು ಒಪ್ಪುತ್ತಿಲ್ಲವಾದ್ದರಿಂದ ಅದನ್ನು ಪ್ರತಿಭಟಿಸುತ್ತಾ ನಾನು ಸಭಾತ್ಯಾಗ ಮಾಡುತ್ತಿದ್ದೇನೆ.

(ಈ ಸಂದರ್ಭದಲ್ಲಿ ಶ್ರೀ ವೈ.ಕೆ. ರಾಮಯ್ಯನವರು ಸದನದಿಂದ ಸಭಾತ್ಯಾಗ ಮಾಡಿದರು ಮತ್ತು ಈಗಾಗಲೇ ಸಭಾತ್ಯಾಗ ಮಾಡಿದ್ದ ಶ್ರೀ ಬೈರೇಗೌಡರು ಪುನಃ ಪೀಠಕ್ಕೆ ಬಂದು ಕುಳಿತರು).

ಅಧ್ಯಕ್ಷರು : ಬೈರೇಗೌಡರೇ, ಕೆಲವು ಪ್ರಕ್ರಿಯೆಗಳನ್ನು ಆಯಾ ಕಾಲಕ್ಕೆ ಮಾಡದೆ ಹೋದರೆ ಎಂತಹ ಅನಾಹುತವಾಗುತ್ತದೆ ಎನ್ನುತಕ್ಕಂಥಾದ್ದಕ್ಕೆ ನೀವು ಹಾಗೂ ಶ್ರೀ ರಾಮಯ್ಯನವರು ಉದಾಹರಣೆ. ನೀವೇನೋ ಸಭಾತ್ಯಾಗ ಮಾಡಿ ಹೋದಿರಿ, ಆಗ ರಾಮಯ್ಯನವರು ನಿಮ್ಮನ್ನು ಹಿಂಬಾಲಿಸಬೇಕಾಗಿತ್ತು. ಅಷ್ಟರಲ್ಲಿ ನೀವು ವಾಪಸ್ಸು ಬಂದಿರಿ, ಅವರು ಹೊರಗೆ ಹೋಗಿದ್ದಾರೆ. ಆದುದರಿಂದ, this has some serious implications. This is a lesson for everyone of this House. Whatever should happen, should happen at a given point of time.

ಶ್ರೀ ಸಿ. ಬೈರೇಗೌಡ : (ವೇಮಗಲ್) ವಿಷಯ : ಹಾಲು ಉತ್ಪಾದಕರಿಗೆ ಪಾಲಿನ ಬೆಲೆಯನ್ನು ಹೆಚ್ಚಿಗೆ ನೀಡುವ ಬಗ್ಗೆ ಸನ್ಮಾನ್ಯ ಸಭಾಧ್ಯಕ್ಷರೇ, ನಾನು ವಾಪಸ್ಸು ಬಂದ ಕಾರಣವೇನೆಂದರೆ, ಕೆಲವು ಗುರುತರವಾದಂಥ ವಿಚಾರ ಅಲ್ಲಿಗೆ ಮುಕ್ತಾಯವಾಯಿತೆಂದು ನನ್ನ ಭಾವನೆ. ಅಲ್ಲದೆ, ನಾನು ಬೇರೆ ಕೆಲವು ಗುರುತರವಾಗಿರತಕ್ಕಂಥ ವಿಚಾರಗಳನ್ನು ಸಹ ಪ್ರಸ್ತಾಪಿಸಬೇಕಾಗಿದೆ. ಇವೊತ್ತು ಅಧಿವೇಶನದ ಕೊನೆಯ ದಿವಸವೆಂದು ನಾನು ಅಂದುಕೊಂಡಿದ್ದೇನೆ. ನಾವು ಹೊರಗಡೆ ಹೋದಾಗ ತಾವು ಅಕಸ್ಮಾತ್ ನನ್ನ ಹೆಸರನ್ನು ಕರೆದರೆ, ಆಗ ನಾನು ಸದನದಲ್ಲಿ ಇಲ್ಲದಿದ್ದರೆ ನಾನು ಆಗ ಕರ್ತವ್ಯಲೋಪ ಮಾಡಿದಂತೆ ಆಗುತ್ತದೆ. ಆ ದೃಷ್ಟಿಯಿಂದ ನಾನು ಪುನಃ ವಾಪಸ್ಸು ಬಂದೆನೇ ವಿನಃ ಬೇರೆ ಯಾವ ಕಾರಣದಿಂದಲೂ ಅಲ್ಲ. ಈ ಸದನ ಪ್ರಾರಂಭವಾದಾಗ ಅವೊತ್ತೇ ನಾನು ತಮ್ಮ ಗಮನಕ್ಕೆ ತಂದಿದ್ದೇನೆ, ಇವೊತ್ತು ಸಹ ತಮ್ಮ ಗಮನಕ್ಕೆ ತಂದಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಇವೊತ್ತಿನ ದಿವಸ ಸದನದಲ್ಲಿದ್ದಾರೆ. ನನ್ನದು ಮೂರು ವಿಚಾರಗಳಿವೆ. ಮೊದಲನೆಯದಾಗಿ, ಇವೊತ್ತು ಹಾಲು ಉತ್ಪಾದಕರ ಮಹಾ ಮಂಡಲಿ ಹಾಲಿನ ಬೆಲೆಯನ್ನು ಹೆಚ್ಚಿಸತಕ್ಕಂಥ ತೀರ್ಮಾನಕ್ಕೆ ಬಂದಿದೆ. ಇದರ ಬಗ್ಗೆ ನಾನು ವಿವರಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಹಾಲು ಉತ್ಪಾದಕರ ಮಹಾಮಂಡಳಿಯವರು ಸರ್ಕಾರಕ್ಕೆ ಶಿಫಾರಸ್ಸನ್ನು ಕಳುಹಿಸಿದ್ದಾರೆ. ಇದರ ಬಗ್ಗೆ ಸರ್ಕಾರ ಏನು ತೀರ್ಮಾನ ಮಾಡಿದ ಅಥವಾ ಮಾಡುತ್ತದೆ ಅಥವಾ ಇಲ್ಲವೇ ಎನ್ನುತಕ್ಕಂಥ ಮಾತನ್ನು ಇವೊತ್ತು ತಿಳಿಸಬೇಕು. ಕಾರಣವೇನೆಂದರೆ ಇವೊತ್ತಿನ ದಿವಸ ಹಾಲಿನ ಉತ್ಪಾದನೆ ಕಡಿಮೆಯಾಗುತ್ತಿದೆ. ಇದರ ಬಗ್ಗೆ ನಾವು ಹೇಳಬೇಕಾಗಿಲ್ಲ, ಆಂಕಿ–ಅಂಶಗಳೇ ತೋರಿಸುತ್ತವೆ. ಇದಕ್ಕೆ ಕಾರಣವೇನೆಂದರೆ ಇವೊತ್ತಿನ ದಿವಸ ಹಾಲು ಉತ್ಪಾದಕರಿಗೆ ಸರಿಯಾದ ಬೆಲೆ ಸಿಗುತ್ತಿಲ್ಲ. ಸರಿಯಾದಂಥ ಬೆಲೆ